# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಂದಾಯ ಅಧಿಕಾರಿಗಳ ಕಛೇರಿ, ಗೋವಿಂದರಾಜನಗರ ವಿಭಾಗ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾಬಡಾವಣೆ, ಬೆಂಗಳೂರು–560072.

ಸಂಖ್ಯೆ: ಕಂ.ಅ(ಗೋ.ನ)/ಪಿ.ಆರ್/25/2020 ದಿನಾಂಕ :20/02/2021

ದಿನಾಂಕ: 20.02.2021 ರಂದು ವಾರ್ಡ್ 126 ಮಾರುತಿ ಮಂದಿರ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು:

ಹಾಜರಿದ್ದ ಅಧಿಕಾರಿಗಳು:

1. ಕಂದಾಯ ಅಧಿಕಾರಿ (ಗೋವಿಂದರಾಜನಗರ)
2. ಸಹಾಯಕ ಅಭಿಯಂತರರು ವಾರ್ಡ್ 126
3. ಟ್ರಾಫಿಕ್ ಪೋಲಿಸ್ ವಿಜಯನಗರ ಪೋಲಿಸ್‌ಠಾಣೆ
4. ಪಶು ಸಂಗೋಪನೆ ಇಲಾಖೆ
5. ತೋಟಗಾರಿಕೆ ಪರಿವೀಕ್ಷಕರು
6. ಆರೋಗ್ಯ ಪರಿವೀಕ್ಷಕರು
7. ಬೆಂಗಳೂರು ನೀರು ಸರಬರಾಜು ಮಂಡಳಿ
8. ಬೆಸ್ಕಾಂ
9. ಬೀದಿ ದೀಪ ನಿರ್ವಹಣೆ
10. ಕೆನರಾಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್
11. ವಿನಾಯಕ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್
12. ಪಿಎಫ್ ಲೇಔಟ್ ವೆಲ್‌ಫೇರ್ ಅಸೋಸಿಯೇಷನ್
13. ಕೆ ಹೆಚ್ ಬಿ ಎಂಎಸ್ ಬಿಲ್ಡಿಂಗ್ ವೆಲ್‌ಫೇರ್ ಅಸೋಷಿಯೇಷನ್

ವಾರ್ಡ್‌ನ ಅಧ್ಯಕ್ಷರು ಸಭೆಗೆ ಹಾಜರಾದವರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ 126 ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯಲ್ಲಿ ಉದ್ಯಾನವನದ ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ರಸ್ತೆಗುಂಡಿ ಮುಚ್ಚುವ ಬಗ್ಗೆ ಬೀದಿ ದೀಪಗಳ ನಿರ್ವಹಣೆ, ಮರಗಳ ರೆಂಬೆಗಳನ್ನು ಕಡಿಯುವ, ಸಿಸಿ ಕ್ಯಾಮರಗಳ ಅಳವಡಿಕೆಗೆ ಸಂಬಂಧಿಸಿದಂತೆ ಹಾಗೂ ಇತರೆ ವಿಷಯಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಲು ಕರೆಯಲಾಯಿತು.

1. ಮೊದಲನೆಯದಾಗಿ ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು 4ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆಯಲ್ಲಿನ ಮೋರಿಗಳಲ್ಲಿ ಕಸ ತುಂಬಿರುವುದಾಗಿ ತಿಳಿಸಿದ್ದರಿಂದ ಕೂಡಲೇ ಕಸವನ್ನು ತೆಗೆಯುವಂತೆ ಆರೋಗ್ಯ ಪರಿವೀಕ್ಷರಿಗೆ ತಿಳಿಸಲಾಯಿತು.
2. ಕಸದ ಪಾಯಿಂಟನ್ನು ಬದಲಾಯಿಸುವಂತೆ ಹಿಂದಿನ ನಗರ ಪಾಲಿಕೆಯ ಸದಸ್ಯರಿಗೆ ತಿಳಿಸಿದ್ದಾಗಿಯು ಕೂಡ ಯಾವ ವ್ಯವಸ್ಥೆಯನ್ನು ಮಾಡದೇ ಇರುವುದರಿಂದ ಕೂಡಲೇ ಕಸದ ಪಾಯಿಂಟನ್ನು ವಾರ್ಡ್ 126ರ ಶನಿಮಹಾತ್ಮ ದೇವಸ್ಥಾನದ ಹತ್ತಿರದ ಮೈದಾನದಲ್ಲಿ ವ್ಯವಸ್ಥೆಯಾಗುವಂತೆ Solid Waste Management ರವರಿಗೆ ಪತ್ರ ಬರೆಯುವಂತೆ ಸಭೆಯಲ್ಲಿ ಹಾಜರಿದ್ದವರು ಸಲಹೆ ನೀಡಿದರು.
3. ಪಿಎಫ್ ಲೇಔಟ್ ವೆಲ್‌ಫೇರ್ ಅಸೋಸಿಯೇಷನ್ ರವರು ಸದರಿ ಬಡಾವಣೆಯಲ್ಲಿ ಉದ್ಯಾನವನದ ಪಕ್ಕದಲ್ಲಿ ಅನಧೀಕೃತವಾಗಿ ವಾಹನಗಳ ಪಾರ್ಕಿಂಗ್ ಮಾಡಿದ್ದು ಹಗಲು ರಾತ್ರಿ ಸಮಯದಲ್ಲಿಯೂ ಕೂಡ ಅನಧೀಕೃತ ವಾಹನಗಳನ್ನು ನಿಲ್ಲಿಸಿರುತ್ತಾರೆಂದು ತಿಳಿಸಿದ್ಧರಿಂದ ಸಭೆಗೆ ಹಾಜರಿದ್ದ ಟ್ರಾಫಿಕ್ ಸಬ್ ಇನ್ಸ್‌ಪೆಕ್ಟರ್ ರವರು ಮಾತನಾಡಿ ಕಛೇರಿಯ ದೂರವಾಣಿ ಸಂಖ್ಯೆ 22942809ಕ್ಕೆ ಕರೆಮಾಡಿ ದೂರು ದಾಖಲಿಸಿದ ನಂತರ ತಾತ್ಕಾಲಿಕವಾಗಿ ಅನಧೀಕೃತ ವಾಹನ ನಿಲುಗಡೆಯನ್ನು ತಡೆಯಬಹುದು ಹೊರತು ಇದಕ್ಕೆ ಸಂಬಂಧಿಸಿದಂತೆ ನಮ್ಮ

Scanned by CamScanner

ಇಲಾಖಾ ವತಿಯಿಂದ ಯಾವುದೇ ಶಾಶ್ವತವಾಗಿ ವಾಹನ ನಿಲುಗಡೆಯನ್ನು ತಡೆಯುವ ಬಗ್ಗೆ ನೋಟಿಫಿಕೇಷನ್ ಆಗಿರುವುದಿಲ್ಲವೆಂದು ತಿಳಿಸಿದರು.

4. ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಗಣಪತಿ ದೇವಸ್ಥಾನ ಮುಂಭಾಗದ ಟ್ರಾನ್ಸ್‌ಫಾರ್ಮರ್ ನ್ನು ಇನ್ನು ಬದಲಾಯಿಸಿಲ್ಲವೆಂದು ಪ್ರಸ್ತಾಪಿಸಿದಾಗ ಹಾಜರಾಗಿದ್ದ ಸಹಾಯಕ ಅಭಿಯಂತರರು ಸದರಿ ಕಡತವು ವ್ಯವಹಾರದಲ್ಲಿರುವುದಾಗಿ ತಿಳಿಸಿದ್ದು ಸಂಬಂಧಪಟ್ಟ ಬೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಾದ ನಾರಾಯಣ ಮೂರ್ತಿ ರವರ ಮೊಬೈಲ್ ಸಂಖ್ಯೆ 9449870182 ಕ್ಕೆ ಕರೆಮಾಡಿ ವಿಷಯನ್ನು ಕೇಳಬಹುದೆಂದು ಉತ್ತರಿಸಿದರು.
5. ಶ್ರೀ ಟಿ ರಾಮು ಕೆ ಹೆಚ್ ಬಿ, ಎಂ ಎಸ್ ಬಿಲ್ಡಿಂಗ್ ಓನರ್ ವೆಲ್‌ಫೇರ್ ಅಸೋಸಿಯೇಷನ್ ರವರು ಕೃತಿಕಾ ಅಪಾರ್ಟಮೆಂಟ್ ಬಳಿ ಟ್ರಾನ್ಸ್‌ಪಾರ್ಮರ್ ತುಂಬಾ ಹಳೆಯದಾಗಿದ್ದು ಆಗಾಗ ಕೆಟ್ಟು ಹೋಗುತ್ತಿರುವುದರಿಂದ ಬದಲಾಯಿಸುವಂತೆ ಈಗಾಗಲೇ ಹಲವಾರು ಸಭೆಗಳಲ್ಲಿ ಪ್ರಸ್ತಾಪಿಸಿದ್ದರೂ ಕೂಡ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಮಾತನಾಡಿದಾಗ, ಸಭೆಗೆ ಹಾಜರಾಗಿದ್ದ ಬೆಸ್ಕಾಂ ಅಧಿಕಾರಿ / ಸಿಬ್ಬಂದಿ ರವರು ಸದರಿ ಪ್ರದೇಶಕ್ಕೆ ಸಹಾಯಕ ಅಭಿಯಂತರರು ಆದ ಚಂದ್ರಶೇಖರ್ – 9449869136, ಕಿರಿಯ ಅಭಿಯಂತರರು ಆದ ಮಂಜು – 9449869211, ಮತ್ತು ಮಲ್ಲೇಶ್ – 9449869141 ರವರನ್ನು ಸಂಪರ್ಕಿಸುವಂತೆ ತಿಳಿಸಿದರು.
6. ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು 6ನೇ ಮುಖ್ಯರಸ್ತೆಯಲ್ಲಿ 1 ವಾರದಿಂದ ಬೀದಿ ದೀಪ ಉರಿಯುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದಾಗ ಸಭೆಗೆ ಹಾಜರಿದ್ದ ಲೈನ್ ಮ್ಯಾನ್ ರವರು ಈಗಾಗಲೇ ಬೀದಿ ದೀಪವನ್ನು ರಿಪೇರಿ ಮಾಡಲಾಗಿದೆ ಎಂದು ತಿಳಿಸಿದರು.
7. ವಾರ್ಡ್ 126 ಮಾರುತಿ ಮಂದಿರ ದೇವಸ್ಥಾನದ ಹತ್ತಿರ ಎಲ್ ಶೇಪ್ ನಲ್ಲಿ ಮುಖ್ಯರಸ್ತೆ ಇದ್ದು ಇದುವರೆವಿಗೂ ಬೀದಿ ದೀಪ ಕಂಬಗಳನ್ನು ಅಳವಡಿಸಲು ಯಾವುದೇ ಕೇಬಲ್‌ಗಳನ್ನು ಅಳವಡಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದಾಗಿ ತಿಳಿಸಿದರು ಆದುದರಿಂದ ಆದಷ್ಟು ಬೇಗನೇ ಕೇಬಲ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಕೋರಿದರು.
8. ಪಿಎಫ್ ಲೇಔಟ್ 5ನೇ ಅಡ್ಡರಸ್ತೆಯಲ್ಲಿ ಡ್ರೈನೇಜ್ ಸಮಸ್ಯೆ ಇರುವುದಾಗಿ ತಿಳಿಸಿದಾಗ ಹಾಜರಿದ್ದ BWSSB , AE ರಾಹುಲ್ ರವರು ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು ಹಾಗೂ ಮೊಬೈಲ್ ಸಂಖ್ಯೆ 7026266644 ಕ್ಕೆ ಕರೆಮಾಡಿ ಸಮಸ್ಯೆಯನ್ನು ತಿಳಿಸುವಂತೆ ಸಭೆಯಲ್ಲಿ ಹೇಳಿದರು.
9. ಮಾನ್ಯ ಆಡಳಿತಗಾರರು ದಿನಾಂಕ: 05.02.2021 ರಂದು ಟಿಪ್ಪಣಿಯಲ್ಲಿ ಬಿಬಿಎಂಪಿ 2021-22ನೇ ಸಾಲಿನ ಅಯವ್ಯಯ ಸಿದ್ಧತೆಯ ಪೂರ್ವದಲ್ಲಿ ಫೆಬ್ರವರಿ 2021 ರ ಮೂರನೇ ವಾರದಲ್ಲಿ ನಡೆಯುವ 198 ವಾರ್ಡ್‌ಗಳ ವಾರ್ಡ್ ಕಮಿಟಿ ಸಭೆಯಲ್ಲಿ ವಿಶೇಷವಾಗಿ ಬಿಬಿಎಂಪಿಯ ಅಯವ್ಯಯಕ್ಕೆ ಪೂರಕವಾದ ಸಲಹೆ / ಸೂಚನೆಗಳ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಬೇಕೆಂದು ತಿಳಿಸಿರುವುದರಿಂದ ಕೆಲವು ಸದಸ್ಯರು ಈ ಕೆಳಕಂಡಂತೆ ಸಲಹೆಗಳನ್ನು ನೀಡಿರುತ್ತಾರೆ.
    - ಪಾದಚಾರಿ ಮಾರ್ಗಗಳ ಕಾಮಗಾರಿ ಕಾರ್ಯವನ್ನು ಆದಷ್ಟು ಕಡಿಮೆ ಮಾಡಿಸಬೇಕು.
    - ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮತ್ತು ಬಿಬಿಎಂಪಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಒತ್ತನ್ನು ನೀಡಬೇಕೆಂದು ಸಲಹೆ ನೀಡಿದರು.
    - ಬಿಬಿಎಂಪಿ ಕಛೇರಿಗಳನ್ನು ಮತ್ತು ಶಾಲೆಗಳಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು (Fire Safety) ಅಳವಡಿಸಬೇಕೆಂದು ತಿಳಿಸಿದರು.

N Uma 20/2/2021

(ಎನ್ ಉಮಾ)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ
ಹಾಗೂ ಕಂದಾಯ ಅಧಿಕಾರಿ
ಗೋವಿಂದರಾಜನಗರ
ವಾರ್ಡ್ 126, ಮಾರುತಿ ಮಂದಿರ

Scanned by CamScanner